ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೆಳಕಂಡ ಗ್ರಾಮೀಣ ಪಶುವೈದ್ಯ ಶಾಲೆಗಳಲ್ಲಿ ಪಶುವೈದ್ಯಕೀಯ ಜಾನುವಾರು ನಿರೀಕ್ಷಕರ (ದರ್ಜೆ—೧) ಹುದ್ದೆಗಳು ಖಾಲಿ ಇರುತ್ತವೆ

೧) ಗ್ರಾಮೀಣ ಪಶುವೈದ್ಯಶಾಲೆ ಅಡ್ಯನಡ್ಕ, ಬಂಟ್ವಾಳ, ತಾಲ್ಲೂಕು. — ದಿನಾಂಕ ೧-೬-೧೯೮೬ ರಿಂದ (೮ ತಿಂಗಳಿಂದ)

೨) ಗ್ರಾಮೀಣ ಪಶುವೈದ್ಯಶಾಲೆ, ಕೋಟೇಕಾರ್, ಮಂಗಳೂರು ತಾಲ್ಲೂಕು. — ದಿನಾಂಕ ೪-೭-೧೯೮೬ ರಿಂದ (೭ ತಿಂಗಳಿಂದ)

೩) ಗ್ರಾಮೀಣ ಪಶುವೈದ್ಯಶಾಲೆ, ಹುಣ್ಸೆಮಕ್ಕಿ, ಕುಂದಾಪುರ ತಾಲ್ಲೂಕು. — ದಿನಾಂಕ ೨೨-೭-೧೯೮೬ ರಿಂದ (೭ ತಿಂಗಳಿಂದ)

ಆ) ಮೇಲ್ಕಂಡ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಇ) ಸಧ್ಯಕ್ಕಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಹೊಸ ಪಶುಕಶಾಲೆಯಗಳನ್ನು ಪ್ರಾರಂಭಿಸಲಾಗುವುದೆನ್ನುವ ಆಶ್ವಾಸನೆ ಸಿಕ್ಕಿತ್ತು. ಈ ವರ್ಷ ಸದಸ್ಯಕ್ಕೆ ಇಲ್ಲ ಎನ್ನುವ ಉತ್ತರ ಬಂದಿದೆ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುಮೆ ಏನು? ೧೯೭೨ರಲ್ಲಿ ಪಶುವೈದ್ಯ ಅಧಿಕಾರಿಗಳು ಕುಂದಾಪುರ ತಾಲ್ಲೂಕಿನ ನಾಡಾ ಗ್ರಾಮ, ಅಮಾವಾಸ್ಯೆ ಬೈಲಂಗಳಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವುದಾಗಿ ತಿಳಿಸಿದ್ದರೂ, ಇದುವರೆಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರದ ಆಲೋಚನೆ ಏನು? ಅದು ಈ ಪಟ್ಟಿಯಲ್ಲಿ ಬರುವುದಿಲ್ಲ.

ಶ್ರೀ ಕೆ. ಎಂ ಕೃಷ್ಣಾ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ೭೫೦೦ ಜಾನುವಾರುಗಳು ಇರತಕ್ಕ ಪ್ರದೇಶದಲ್ಲಿ ಪಶುಚಿಕಿತ್ಸಾಲಯಗಳನ್ನು ತೆರೆಯಬೇಕೆಂಬುದು ಸರ್ಕಾರದ ಉದ್ದೇಶ. ಆದರೆ, ಹಣದ ಸಂಪನ್ಮೂಲವನ್ನು ನೋಡಿಕೊಂಡು ಹಂತಹಂತವಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಇದನ್ನು ಜಾರಿಗೆ ತರುವ ಯೋಜನೆ ಸರ್ಕಾರಕ್ಕೆ ಇದೆ. ೧೯೭೨ರಲ್ಲಿ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿತ್ತು ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಟ್ಟರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮುಚ್ಚಲಾದ ಕೈಗಾರಿಕೆಗಳ ಕಾರ್ಮಿಕರು

೧೧೫೭. ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಜಗಳೂರು) —ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುತ್ ಅಭಾವ ಹಾಗೂ ಇತರ ಕಾರಣಗಳಿಂದ ರಾಜ್ಯದ ಎಷ್ಟು ಕೈಗಾರಿಕೆ (ಭಾರಿ ಉದ್ಯಮಂ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳು) ಗಳನ್ನು ಮುಚ್ಚಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಇದರಿಂದ ಎಷ್ಟು ಮಂದಿ ಕಾರ್ಮಿಕರಿಗೆ ತೊಂದರೆಯಾಗಿದೆ ಹಾಗೂ.

ಇ) ತೊಂದರೆಗೀಡಾದ ಕಾರ್ಮಿಕರಿಗೆ ಪರಿಹಾರವನ್ನೇನಾದರೂ ನೀಡಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್, (ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೫೦೧.

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಇ) ಈ ಬಗ್ಗೆ ಮಾಹಿತಿ ಇರುವುದಿಲ್ಲ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್‌ನ ಪ್ರಕಾರ ಕಾರ್ಮಿಕ ಆಯುಕ್ತರಿಂದ ವಿವಾದಗಳನ್ನು ನಡೆಸಿ ಪರಿಹಾರ ಒದಗಿಸುವಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಬಗ್ಗೆ ವಿವರವಾದ ಮಾಹಿತಿಯಂ ಸಂಬಂಧಪಟ್ಟ ಉದ್ದಿಮೆಗಳಿಂದ ಪಡೆಯಬೇಕಾಗುತ್ತದೆ.

(ಅ) ಮಂತ್ರಿ (ಅ)ಗೆ ಕೊಟ್ಟಿರುವ ಅನುಬಂಧ

ಜಿಲ್ಲಾವಾರು ವಿದ್ಯುತ್ ಅಭಾವ ಹಾಗೂ ಇತರ ಕಾರಣಗಳಿಂದ ಮುಚ್ಚಿರುವ ಕೈಗಾರಿಕೆಗಳ ವಿವರ.

ಜಿಲ್ಲೆಗಳು	ಸಣ್ಣ ಪ್ರಮಾಣದ ಘಟಕಗಳು		ಮಧ್ಯಮ ಪ್ರಮಾಣದ ಘಟಕಗಳು		ದೊಡ್ಡ ಪ್ರಮಾಣದ ಘಟಕಗಳು	
	ಮುಚ್ಚಲ್ಪಟ್ಟ ಘಟಕಗಳ ಸಂಖ್ಯೆ	ತೊಂದರೆಗೀಡಾದ ಕಾರ್ಮಿಕರ ಸಂಖ್ಯೆ	ಮುಚ್ಚಲ್ಪಟ್ಟ ಘಟಕಗಳ ಸಂಖ್ಯೆ	ತೊಂದರೆಗೀಡಾದ ಕಾರ್ಮಿಕರ ಸಂಖ್ಯೆ	ಮುಚ್ಚಲ್ಪಟ್ಟ ಘಟಕಗಳ ಸಂಖ್ಯೆ	ತೊಂದರೆಗೀಡಾದ ಕಾರ್ಮಿಕರ ಸಂಖ್ಯೆ
೧. ಬೆಂಗಳೂರು ಗ್ರಾಮಾಂತರ	೬	೮೮	...	...	...	...
೨. ಬೆಂಗಳೂರು ಜಿಲ್ಲೆ	೧೫	೨೧೪	೩	೧೫೦	೧	೨೧೦
೩. ಬಳ್ಳಾರಿ	೧೯	೭೨೮	...	...	...	...
೪. ಬೀದರ್	೧೬	೫೮	...	...	...	...
೫. ಚಿಕ್ಕಮಂಗಳೂರು	೧	೫೦	...	...	...	...
೬. ಕೋಲಾರ	...	...	...	...	೧	೧೦೦೦
೭. ಹಾಸನ	೨	೨೦	...	...	...	...
೮ ಮಂಗಳೂರು (ದ.ಕ. ಜಿಲ್ಲೆ)	೧೦೮	೭೧೯	೨	೧೩೧	...	...
೯. ಶಿವಮೊಗ್ಗ	೧೨	೧೩೫	೧	೨೫	...	...
೧೦. ರಾಯಚೂರು	೧೦	೧೦೮	೧	೩೫	೧	೭೫
೧೧. ಧಾರವಾಡ	೯	೫೭	...	...		...
೧೨. ತುಮಕೂರು	೫	೧೬೨	...	...	...	...
೧೩. ಕಾರವಾರ (ಉ.ಕ.)	೨೭	೩೬೯	...	...	...	...
೧೪. ಚಿತ್ರದುರ್ಗ	೧೭	೮೫	...	...	೨	೭೦೦
೧೫. ಮಂಡ್ಯ	೧೭	೧೯೦	೧	೫೦	...	...
೧೬. ಮೈಸೂರು	೪೫	೨೭೦	೩	೫೬೩	೧	೨೨೯೦
	೪೮೪	೩೨೫೪	೧೧	೯೫೪	೬	೪೨೭೫

ಶ್ರೀ ಜಿ. ಪರಮೇಶ್ವರಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ತೊಂದರೆಗೆ ಒಳಗಾದವರ ಕಾರ್ಮಿಕರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ೩೬೦ ಎಂದು ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ಜಿಲ್ಲೆ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಮುಚ್ಚಲಾಗಿದೆ. ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವಂಥ ಸುಮಾರು ೨೫೦೦ ಜನ ಕಾರ್ಮಿಕರು ತೊಂದರೆಗೆ ಗುರಿಯಾಗಿದ್ದಾರೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಸರಿಯಾಗಿದೆಯೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ ದೊಡ್ಡ ಪ್ರಮಾಣದ ಕೈಗಾರಿಕೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು, ಮಧ್ಯಮ ಪ್ರಮಾಣದ ಕೈಗಾರಿಕೆಗಳು ಹೀಗೆ ಮೂರು ವರ್ಗಗಳು ಇವೆ. ಅಲೆಂಬಿಕ್

ಗ್ಲಾಸ್ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಖಾಸಗೀ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ನೌಕರರ ಮಾಹಿತಿ ನಮಗೆ ಬಂದಿಲ್ಲ. ಕೆಲಸ ಮಾಡುವಂಥ ನೌಕರರು ಎಷ್ಟು ಎನ್ನುವುದು ಕಾರ್ಮಿಕ ಇಲಾಖೆಯಲ್ಲಿರುತ್ತದೆ. ಯೂನಿಟ್‌ಗಳನ್ನು ಮುಚ್ಚಿದ್ದನ್ನೂ ತಿಳಿಸಬೇಕು. ಇಲ್ಲದಿದ್ದರೆ ಅಧಿಕೃತವಾಗಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಸ್ವಾಮಿ, ಎರಡು ವರ್ಷಗಳಿಂದ ಮುಚ್ಚಿದ್ದಾರೆ. ಅಜಿಟೇಷನ್ ಕೂಡ ಆಯಿತು. ಮಾಹಿತಿ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಕಾರ್ಮಿಕರಿಗೆ ಯಾವಾಗ ಕೆಲಸ ಕೊಡುತ್ತೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ಅಲೆಂಬಿಕ್ ಗ್ಲಾಸ್ ಕಾರ್ಖಾನೆಯನ್ನು ಪ್ರಾರಂಭಿಸುವುದಕ್ಕೆ ಎಷ್ಟು ಪ್ರಯತ್ನಪಟ್ಟರೂ ಅದರ ಮಾಲೀಕರು ಸಿಗುತ್ತಿಲ್ಲ. ಸರ್ಕಾರಕ್ಕೂ ಹೇಳದೆ ಯಾರಿಗೂ ಹೇಳದೆ ಹೋಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಎಲ್ಲಿಗೆ ಹೋಗಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಎಲ್ಲಿಗೆ ಹೋದರೂ ಎಂದು ಹುಡುಕಿಸಬೇಕಾಗಿದೆ. ಕಾನೂನು ಪ್ರಕಾರ ರೆಕಗ್‌ನೈಸ್ ಮಾಡುವುದಕ್ಕಾಗುವುದಿಲ್ಲ.

ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ

೯೩೨. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಈ ವರ್ಷದಲ್ಲಿ ಎಷ್ಟು ಮಂದಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲವನ್ನು ಕೊಡಲಾಗಿದೆ ಮತ್ತು ಮೈಸೂರು ನಗರದಲ್ಲಿ ಎಷ್ಟು ಮಂದಿಗೆ ಕೊಡಲಾಗಿದೆ.

(ಆ) ಕೊಟ್ಟಿರುವವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರು ಎಷ್ಟು ?

(ಇ) ಮಂಜೂರಾಗಿರುವವರಿಗೆಲ್ಲ ಬ್ಯಾಂಕುಗಳಿಂದ ಸಾಲ ಒದಗಿಸಲು ಜಿಲ್ಲಾ ಕೈಗಾರಿಕಾ ಕೇಂದ್ರವು ಏನು ಕ್ರಮ ಕೈಗೊಂಡಿದೆ.

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ಫೆಬ್ರುವರಿ ಅಂತ್ಯದವರೆಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಯಾರಿಗೂ ಸಾಲವನ್ನು ಕೊಟ್ಟಿರುವುದಿಲ್ಲ.

(ಆ) ಮೇಲೆ ತಿಳಿಸಿರುವ ಕಾರಣ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

(ಇ) ಅರ್ಜಿಗಳನ್ನು ವಿವಿಧ ಬ್ಯಾಂಕುಗಳಿಗೆ ಕಳುಹಿಸಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.— ನಾನು ಕೇಳಿದ ಮೂರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗಾದರೂ ಉತ್ತರವನ್ನು ಕೊಡತಕ್ಕ ಸೌಜನ್ಯವನ್ನು ಮಾನ್ಯ ಸಚಿವರು ತೋರಿಸಿದ್ದಾರೆ. ಅದಕ್ಕೆ ನಾನು ಕೃತಜ್ಞನಾಗಿದ್ದೇನೆ. ನನ್ನ ಮೂರನೆಯ ಪ್ರಶ್ನೆಗೆ ಅರ್ಜಿಗಳನ್ನು ವಿವಿಧ ಬ್ಯಾಂಕುಗಳಿಗೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಒಟ್ಟು ಎಷ್ಟು ಅರ್ಜಿಗಳನ್ನು ಕಳುಹಿಸಲಾಗಿದೆ. ಅದರಲ್ಲಿ ಪರಿಶಿಷ್ಟ ಜಾತಿ ಎಷ್ಟು, ಪರಿಶಿಷ್ಟ ಪಂಗಡ ಎಷ್ಟು ಹಾಗೂ ಇತರೇ ಅರ್ಜಿಗಳು ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ಪೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಪೆಡ್ಯೂಲ್ಡ್ ಟ್ರೈಬ್ಸ್‌ನವರಿಂದ ೨೩೮ ಅರ್ಜಿಗಳು ಬಂದಿವೆ. ಬ್ಯಾಕ್‌ವರ್ಡ್ ಕಮ್ಯುನಿಟೀಸ್‌ರವರಿಂದ ೩೬೨ ಅರ್ಜಿಗಳು ಬಂದಿದೆ. ಬ್ಯಾಕ್‌ವರ್ಡ್ ಕ್ಲಾಸ್‌ನವರಿಂದ ೫೭ ಅರ್ಜಿಗಳು ಬಂದಿದೆ. ಇದು ಹಿಂದಿನ ಕ್ಲಾಸಿಫಿಕೇಷನ್ ಪ್ರಕಾರ ಈಗಿನ ಕ್ಲಾಸಿಫಿಕೇಷನ್ ಪ್ರಕಾರ ಅಲ್ಲ. ಬೇರೆಯವರದು ೧೨೮ ಅರ್ಜಿಗಳು ಬಂದಿದೆ. ಇದರ ಬಗ್ಗೆ ಎಲ್ಲಾ ಸೇರಿ ಒಟ್ಟು ೧,೧೧೭ ಅರ್ಜಿಗಳನ್ನು ರೆಕಮಂಡ್ ಮಾಡಲಾಗಿದೆ.